ಓ ಎಸ್ 386/2008

**DW 1**

ದಿಃ 22-03-2021 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು ಃ  ಶ್ರೀ ಬಿ ಕೆ ಜೆ ವಾದಿ ಪರ ವಕೀಲರಿಂದ;

ನಾನು 10 ವರ್ಷಗಳ ಹಿಂದೆ ಖನಗಾಂವದಲ್ಲಿ ಇದ್ದೆ. ನಾನು ಪಿಯುಸಿ ವರೆಗೂ ಓದಿರುತ್ತೇನೆ. ನನಗೆ ಕನ್ನಡ ಹಾಗೂ ಆಂಗ್ಲಭಾಷೆ ಓದಲು ಬರುತ್ತದೆ. ಈರಪ್ಪ ದಾವೆ ಹಾಕಿರುತ್ತಾನೆ ಎಂತದ್ದು ಹಾಕಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ವಾದಿಯು ಪಾಲು ಬೇಕು ಎಂದು ದಾವೆ ಹಾಕಿರುತ್ತಾನೆ. ಈರಪ್ಪಕ್ಕಿಂತ ಮುಂಚೆ ಯಲ್ಲಪ್ಪ ರವರು ದಾವೆ ಹಾಕಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಕಾಗದ ತೆಗೆಸಿ ನೋಡಿದಾಗ ಮುಂಚೆ ದಾವೆ ಯಾರು ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಖರೀದಿ ಪಡೆಯುವಾಗ ಪೇಪರದಲ್ಲಿ ಕೊಟ್ಟಿರುವುದಿಲ್ಲ. ಡೈರಿ ಉತಾರನ್ನು ನಾನು ನೊಡಿಲ್ಲ. ಖರೀದಿ ತೆಗೆದುಕೊಳ್ಳುವ ಮೊದಲು ವಕೀಲರ ಹತ್ತಿರ ತೋರಿಸಿ ಹೊಲ ಖರೀದಿ ಪಡೆಯುವ ಬಗ್ಗೆ ನಾನು ಕೇಳಿರುವುದಿಲ್ಲ. ಖರೀದಿ ಮಾಡುವಕ್ಕಿಂತ ಮುಂಚೆ ನಾನು ಊರಲ್ಲಿ ಈರಪ್ಪ ನಿಂಗಪ್ಪ ಹಮಿನಿ ಇವರಿಗೆ ವಿಚಾರ ಮಡಿರುತ್ತೇನೆ. ಎಷ್ಟನೇ ಇಸ್ವಿಯಲ್ಲಿ ಕೇಸ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ಯಾವ ಆದೇಶ ಆಗಿರುತ್ತದೆ ಇದರ ಕಲಾಪಗಳ ಬಗ್ಗೆ ತಿಳಿದುಕೊಂಡಿರುವುದಿಲ್ಲ. ನಾನು ಮತ್ತು ಪ್ರತಿವಾದಿಯವರು ಒಂದೇ ಓಣಿಯಲ್ಲಿ ಇರುತ್ತೇವೆ ಸಾಕ್ಷಿಯು ಮುಂದುವರಿದು ಒಂದೇ ಊರಲ್ಲಿ ಇರುತ್ತೇವೆ ಎಂದು ನುಡಿದಿರುತ್ತಾರೆ. ಹೊಲಕ್ಕೆ ಮನೆಗೆ 1 ಕಿ ಮೀ ದೂರ ಆಗುತ್ತದೆ. ಈರಪ್ಪ ಬಸವಣೆಪ್ಪ ಇವರು ನನಗೆ ಬೇಟಿ ಆಗುತ್ತಾರೆ. ವಾದಿಯ ಹೆಸರು ಈರಪ್ಪ. ಈರಪ್ಪ ದುಡಂಪ್ಪ ಇವರ ಸಂಬಂಧದ ಬಗ್ಗೆ ನನಗೆ ಗೊತ್ತಿಲ್ಲ. ಆಸ್ತಿಯ ಸರ್ವೇ ನಂ.282 ಇರುತ್ತದೆ ಅದರ ಕ್ಷೇತ್ರ 4 ಎಕರೆ ಇರುತ್ತದೆ. ಈ ಆಸ್ತಿ ಪ್ರತಿವಾದಿ.2 ರವರಿಗೆ ಹೇಗೆ ಬಂದಿರುತ್ತದೆ ಎಂದು ನಾನು ನೋಡಿರುವುದಿಲ್ಲ. ಶಿವಲಿಂಗಪ್ಪ ಇವರ ಮುಂಚೆ ಯಾರ ಹೆಸರು ಇತ್ತು ಎಂದರೆ ಶಿವಲಿಂಗಪ್ಪ ಇವರ ತಂದೆಯ ಹೆಸರು ಇತ್ತು ಎಂದು ನುಡಿದಿರುತ್ತಾರೆ. ದುಂಡಪ್ಪ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿ ವಂಶಾವಳಿ ಕೊಟ್ಟಿರುತ್ತಾರೆ ನಾನು ನೋಡಿಲ್ಲ. ದಾವೆಯಲ್ಲಿ ಬರೆದಿದ್ದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಜವಾಬ ಕೊಡುವ ಕಾಲಕ್ಕೆ ಕಾಗದಪತ್ರಗಳನ್ನು ನೋಡಿರುತ್ತೇನೆ ನಾನು ನನ್ನ ಜವಾಬದಲ್ಲಿ ವಾದಿ ನೀಡಿರುವ ವಂಶಾವಳಿ ಬಗ್ಗೆ ಬರೆಸಿರುತ್ತೇನೆ. ನಾನು ನನ್ನ ಜವಾಬದಲ್ಲಿ ವಂಶಾವಳಿ ಬಗ್ಗೆ ಏನು ಬರೆಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಜವಾಬ ಬರೆಸುವಾಗ ಉತಾರ ಹಾಗೂ ಸಬ ರೆಜಿಸ್ಟರ ಕಚೇರಿಯಲ್ಲಿ ಚೌಕಾಶಿಸಿ ಬರೆಸಿರುತ್ತೇನೆ. ನಾನು ಜವಾಬ ನೋಡಿರುವುದಿಲ್ಲ. ನನ್ನ ಜವಾಬದಲ್ಲಿ ದುಂಡಪ್ಪ ಇವರು ಪಾಪುಲರ ಪರ್ಸನ ಎಂದು ಬರೆಸಿರುತ್ತೇನೆ ಅದರ ಅರ್ಥ ಕೇಳಿದಾಗ ಉತ್ತರ ನೀಡಿರುವುದಿಲ್ಲ.

ದುಂಡಪ್ಪ ಇವರ ತಂದೆಯ ಹೆಸರು ಈರಪ್ಪ ಎಂದರೆ ಸರಿ, ಈರಪ್ಪ ಇವರ ತಂದೆಯ ಹೆಸರು ಬಸಪ್ಪ ಎಂದರೆ ಸರಿ, ಬಸಪ್ಪ ಇವರಿಗೆ 3 ಜನ ಮಕ್ಕಳು ಎಂದರೆ ಸರಿ. ಈರಪ್ಪ ಇವರಿಗೆ 3 ಜನ ಮಕ್ಕಳು ಎಂದರೆ ಸರಿ. ಶಿವಲಿಂಗಪ್ಪ ಇವರು ಎಷ್ಟು ಜನ ಅಣ್ಣತಮ್ಮಂದಿರು ಎಂದರೆ ಗೊತ್ತಿಲ್ಲ. ದುಂಡಪ್ಪ ಇವರ ಹೆಂಡತಿ ಮೃತಪಟ್ಟಿರುತ್ತಾಳೆ. ದುಂಡಪ್ಪ ಇವರಿಗೆ ಎಷ್ಟು ಜನ ಅಣ್ಣತಮ್ಮಂದಿರ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ವಾದಿ ಈರಪ್ಪ ಇವರು ಯಾರ ಮಗ ಎಂದು ವಿಚಾರಿಸಿರುವುದಿಲ್ಲ. ಈರಪ್ಪ ನಮ್ಮ ಮನೆತನಕ್ಕೆ ಸಂಬಂಧ ಇಲ್ಲ ಬೇರೆ ಮನೆತನಕ್ಕೆ ಸಂಬಂಧ ಎಂದು ನಾನು ಯಾವ ದಾಖಲಾತಿಗಳನ್ನು ಹಾಜರುಮಾಡಿಲ್ಲ. ಮೊದಲು ಯಲ್ಲಪ್ಪ ಇವರು ದಾವೆ ಮಾಡಿರುತ್ತಾರೆಂದರೆ ಸರಿ. ಈ ದಾವೆ ಹೂಡಿ 13 ವರ್ಷಗಳು ಆಗಿರುತ್ತವೆ ಎಂದರೆ ಸರಿ. ಮೊದಲಿಂದ ಸಹ ಅವರು ಕೊರ್ಟಿಗೆ ಬರುವುದು ಗೊತ್ತಿತ್ತು ಎಂದರೆ ಸಾಕ್ಷಿಯು ನಾನು ಖರೀದಿ ಪಡೆದ ನಂತರ ಗೊತ್ತಾಯಿತು ಎಂದು ನುಡಿದಿರುತ್ತಾರೆ. ಈರಪ್ಪ ತಮ್ಮ ಬಸಲಿಂಗಪ್ಪ ಇರುತ್ತಾರೆಂದರೆ ಸರಿ, ಅವರ ಮಗನ ಹೆಸರು ಬಸವಂತಪ್ಪ ಅವರು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.3 ರಿಂದ 5 ಇವರು ಇರುತ್ತಾರೆ, ಚನಬಸಪ್ಪ, ಯಲ್ಲಪ್ಪ, ಈರಪ್ಪ ಇವರ ತಂದೆಯ ಹೆಸರು ಬಸವಣ್ಣೆಪ್ಪ ಎಂದರೆ ನನಗೆ ಗೊತ್ತಿಲ್ಲ. ಚನಬಸಪ್ಪ, ಯಲ್ಲಪ್ಪ, ಈರಪ್ಪ ಇವರು ಯಾರ ಮಕ್ಕಳು ಎಂದು ನಾನು ವಿಚಾರಿಸಿರುವುದಿಲ್ಲ. ಪ್ರತಿವಾದಿ ನಂ.3 ರಿಂದ 5 ಇವರು ಮದನಬಾವಿಯಲ್ಲಿ ಇರುತ್ತಾರೆ. ಅವರು ಅಲ್ಲಿ ಯಾಕೆ ಹೋಗಿರುತ್ತಾರೆಂದು ನನಗೆ ಗೊತ್ತಿಲ್ಲ, ಊರಿನವರು ಅಲ್ಲಿಗೆ ಹೋಗಿರುತ್ತಾರೆಂದು ಹೇಳಿರುತ್ತಾರೆ. ಪ್ರತಿವಾದಿ ನಂ.3 ರಿಂದ 5 ಇವರು ತಕರಾರು ಕೊಟ್ಟಿರುತ್ತಾರೆ ಎನ್ನುವ ಪ್ರಶ್ನೆಗೆ ಈರಪ್ಪ ಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ಪ್ರತಿವಾದಿ ನಂ.3 ರಿಂದ 5 ಇವರ ಮಧ್ಯೆ ವಾಟನಿ ಆಗಿರುತ್ತವೆ. 20-30 ವರ್ಷಗಳ ಹಿಂದೆ ಆಗಿರುತ್ತವೆ. ನಾನು ಇದರ ಬಗ್ಗೆ ಡೈರಿ ಹಾಜರುಮಾಡಿರುತ್ತೇನೆ. ವಾಟನಿ ಡೈರಿ ನಂಬರ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.3 ರಿಂದ 5 ರವರಿಗೆ ಯಾವ ಯಾವ ಆಸ್ತಿ ಬಂದಿರುತ್ತದೆ ಎಂದರೆ ಈರಪ್ಪ ವಾದಿಗೆ ಅಡಿಬಟ್ಟಿಯಲ್ಲಿ ಬಂದಿರುತ್ತದೆ. ದುಂಡಪ್ಪ ಇವರಿಗೆ ಸರ್ವೇ 282 ರಲ್ಲಿ ದಾವಾ ಆಸ್ತಿಯಲ್ಲಿ ಬಂದಿರುತ್ತದೆ. ಬಸಪ್ಪ ಇವರಿಗೆ ಮದನಬಾವಿಯಲ್ಲಿ ಬಂದಿರುತ್ತದೆ. ಈರಪ್ಪನಿಗೆ ಬಂದಿರುವ ಆಸ್ತಿಯ ಸರ್ವೇ ನಂಬರ ನನಗೆ ಗೊತ್ತಿಲ್ಲ, ಕ್ಷೇತ್ರ ಗೊತ್ತಿಲ್ಲ ಈರಪ್ಪ ಇವರಿಗೆ ಅಡಿಬಟ್ಟಿಯಲ್ಲಿ ಆಸ್ತಿ ಬಂದಿರುತ್ತದೆ ಎಂದು ನಾನು ಯಾವುದೇ ಕಾಗದಪತ್ರಗಳನ್ನು ಹಾಜರುಮಾಡಿಲ್ಲ ಈರಪ್ಪ ಇವರಿಗೆ ಬಂದ ಆಸ್ತಿಗಳ ಬಗ್ಗೆ ನಾನು ನನ್ನ ಜವಾಬದಲ್ಲಿ ಬರೆಸಿಲ್ಲ. ನಾನು ನನ್ನ ತಕರಾರಲ್ಲಿ ಬರೆಸಿರುತ್ತೇನೆ. ಖರೀದಿ ಪಡೆಯುವಾಗ ನಾನು ವಾಟನಿ ನೋಡಿರುತ್ತೇನೆ. ವಾಟನಿ ಡೈರಿ ನಂಬರ ನನಗೆ ಹೇಳಲು ಆಗುವುದಿಲ್ಲ. ವಾಟನಿ ಕೊರ್ಟಲ್ಲಿ ಅಥವಾ ನೊಂದಣಿಯಲ್ಲಿ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾಟನಿ ಆದ ಬಗ್ಗೆ ಪ್ರತಿವಾದಿ ನಂ.2 ರವರು ಹೇಳಿರುತ್ತಾರೆ. ಕೊರ್ಟನಲ್ಲಿ ನ್ಯಾಯ ಹಾಕಿದಾಗ ಹೇಳಿರುತ್ತಾರೆ. ನಾನು ಡೈರಿ ನಂಬರ ತಿಳಿದುಕೊಂಡ ಓದಿ ಹಾಜರುಮಾಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಚನಬಸಪ್ಪ ಇವರ ತಂದೆಗೆ ಯಾವ ಆಸ್ತಿ ಬಂದಿರುತ್ತದೆ ಎಂದು ನಾನು

ತಿಳಿದುಕೊಂಡಿರುವುದಿಲ್ಲ. ವಾಟನಿ ಆಗಬೇಕಾದರೆ ಹಿರಿಯರ ಆಸ್ತಿಯಲ್ಲಿ ವಾಟನಿ ಮಾಡಿಕೊಳ್ಳುತ್ತಾರೆಂದರೆ ಸರಿ. ವಾಟನಿ ಆದರೆ ಉತಾರದಲ್ಲಿ ವಾಟನಿ ಎಂದು ಬರೆಯುತ್ತಾರೆಂದರೆ ಬರೆದಿಲ್ಲ. ಬಾಯಿ ಹೇಳಿಕೆ ಬಿಟ್ಟರೆ ವಾಟನಿ ಬಗ್ಗೆ ದಾಖಲಾತಿ ಏನೂ ಇಲ್ಲ ಎಂದರೆ ಸರಿ.

ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಶೋಭಾ)
ಹೆ.ದಿ.&ನ್ಯಾದಂ., ಗೋಕಾಕ.